ಮಂಜೂರು ಮಾಡಿಕೊಡುತ್ತೀರಿ?

ಶ್ರೀ ಎಸ್. ಎಂ. ಕೃಷ್ಣ : ಸನ್ಮಾನ್ಯ ಅಧ್ಯಕ್ಷರೇ, ಈಗ ವಿದ್ಯುಚ್ಛಕ್ತಿ ಮಂಡಳಿಯಲ್ಲಿ ಒಂದು ಸೆಕ್ಷನ್ ಆಫೀಸು ತೆರೆಯಬೇಕಾದರೆ ಕನಿಷ್ಟ ಮೂರು ಸಾವಿರ ಇನ್‌ಸ್ಟಲೇಷನ್ ಇರಬೇಕೆಂದು ನಾರ್ಮ್ಸ್‌ನ್ನು ಹಾಕಿಕೊಂಡಿದ್ದೇವೆ. ಆದರೆ ಇಂಡಿ ತಾಲ್ಲೂಕಿನ ಹೊರಟಿ, ಆತರ್ಗ ಹಾಗೂ ದುಲಬೇಡ್‌ಗಳಲ್ಲಿ ಮೂರು ಸಾವಿರ ಇನ್‌ಸ್ಟಲೇಷನ್ ಇಲ್ಲದೇ ಇರುವುದರಿಂದ ನಾವು ಅಲ್ಲಿ ಸೆಕ್ಷನ್ ಆಫೀಸ್‌ಗಳನ್ನು ತೆಗೆಯತಕ್ಕ ಪ್ರಸ್ತಾವನೆ ಸದ್ಯಕ್ಕೆ ವಿದ್ಯುಚ್ಛಕ್ತಿ ಮಂಡಳಿಯ ಮುಂದೆ ಇಲ್ಲ.

ವಿಷಯ : ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಯೋಜನೆಗಳು.

Q : 1446

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ) : ಮಾನ್ಯ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿರುವ ಅಚ್ಚುಕಟ್ಟು ಅಭಿವೃದ್ಧಿ ಯೋಜನೆಗಳಿರುವುವು ಎಷ್ಟು?
ಆ) ಪ್ರತಿಯೊಂದು ಅಚ್ಚುಕಟ್ಟು ಅಭಿವೃದ್ಧಿ ಯೋಜನೆಗೆ ಇಲ್ಲಿಯವರಗೆ ಪ್ರತಿ ವರ್ಷ ಖರ್ಚು ಮಾಡಲಾಗಿರುವ ಹಣವೆಷ್ಟು?
ಇ) ಪ್ರತಿ ವರ್ಷ ಈ ಒಂದು ವಿಭಾಗದಿಂದ ಅಭಿವೃದ್ಧಿ ಕೆಲಸದಲ್ಲಿ ಆಗುತ್ತಿರುವ ಪ್ರಗತಿ ಬಗ್ಗೆ ಸರ್ಕಾರದ ಅನಿಸಿಕೆ ಏನು?

ಶ್ರೀ ಶ್ರೀರಂಗದೇವರಾಯಲು (ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ರಾಜ್ಯ ಸಚಿವರು) :

ಅ) ಐದು.
ಆ) ಖರ್ಚಿನ ವಿವರವನ್ನು ಅನುಬಂಧ - 1 ರಲ್ಲಿ ಒದಗಿಸಲಾಗಿದೆ.
ಇ) ಪ್ರಗತಿ ಸಮಾಧಾನಕರವಾಗಿದೆ.

ಮಂಜೂರು ಮಾಡಿಕೊಡುತ್ತೀರಿ?

ಶ್ರೀ ಎಸ್. ಎಂ. ಕೃಷ್ಣ : ಸನ್ಮಾನ್ಯ ಅಧ್ಯಕ್ಷರೇ, ಈಗ ವಿದ್ಯುಚ್ಛಕ್ತಿ ಮಂಡಳಿಯಲ್ಲಿ ಒಂದು ಸೆಕ್ಷನ್ ಆಫೀಸು ತೆರೆಯಬೇಕಾದರೆ ಕನಿಷ್ಠ ಮೂರು ಸಾವಿರ ಇನ್‌ಸ್ಟಲೇಷನ್ ಇರಬೇಕೆಂದು ನಾರ್ಮ್ಸ್‌ನ್ನು ಹಾಕಿಕೊಂಡಿದ್ದೇವೆ. ಆದರೆ ಇಂಡಿ ತಾಲ್ಲೂಕಿನ ಹೊರಟಿ, ಆತರ್ಗ ಹಾಗೂ ದುಲಖೇಡ್‌ಗಳಲ್ಲಿ ಮೂರು ಸಾವಿರ ಇನ್‌ಸ್ಟಲೇಷನ್ ಇಲ್ಲದೇ ಇರುವುದರಿಂದ ನಾವು ಅಲ್ಲಿ ಸೆಕ್ಷನ್ ಆಫೀಸ್‌ಗಳನ್ನು ತೆಗೆಯತಕ್ಕ ಪ್ರಸ್ತಾವನೆ ಸದ್ಯಕ್ಕೆ ವಿದ್ಯುಚ್ಛಕ್ತಿ ಮಂಡಳಿಯ ಮುಂದೆ ಇಲ್ಲ.

ವಿಷಯ : ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಯೋಜನೆಗಳು.

Q : 1446

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ) : ಮಾನ್ಯ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿರುವ ಅಚ್ಚುಕಟ್ಟು ಅಭಿವೃದ್ಧಿ ಯೋಜನೆಗಳಿರುವುವು ಎಷ್ಟು?
ಆ) ಪ್ರತಿಯೊಂದು ಅಚ್ಚುಕಟ್ಟು ಅಭಿವೃದ್ಧಿ ಯೋಜನೆಗೆ ಇಲ್ಲಿಯವರಗೆ ಪ್ರತಿ ವರ್ಷ ಖರ್ಚು ಮಾಡಲಾಗಿರುವ ಹಣವೆಷ್ಟು?
ಇ) ಪ್ರತಿ ವರ್ಷ ಈ ಒಂದು ವಿಭಾಗದಿಂದ ಅಭಿವೃದ್ಧಿ ಕೆಲಸದಲ್ಲಿ ಆಗುತ್ತಿರುವ ಪ್ರಗತಿ ಬಗ್ಗೆ ಸರ್ಕಾರದ ಅನಿಸಿಕೆ ಏನು?

ಶ್ರೀ ಶ್ರೀರಂಗದೇವರಾಯಲು (ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ರಾಜ್ಯ ಸಚಿವರು) :

ಅ) ಐದು.
ಆ) ಖರ್ಚಿನ ವಿವರವನ್ನು ಅನುಬಂಧ - 1 ರಲ್ಲಿ ಒದಗಿಸಲಾಗಿದೆ.
ಇ) ಪ್ರಗತಿ ಸಮಾಧಾನಕರವಾಗಿದೆ.

ಅನುಬಂಧ - I
ವಾರ್ಷಿಕ ವೆಚ್ಚ

(ರೂ. ಲಕ್ಷಗಳಲ್ಲಿ)

ಕ್ರಮ ಸಂಖ್ಯೆ	ಯೋಜನೆಯ ಹೆಸರು	74-75	75-76	76-77	77-78	78-79	79-80	80-81	81-82	82-83	83-84	84-85	85-86
1)	ತುಂಗಾಭದ್ರಾ ಯೋಜನೆ ಮುನಿರಾಬಾದ್.	-	-	-	-	-	73.66	72.29	108.11	104.55	127.88	147.64	142.39
2)	ಮಲಪ್ರಭಾ ಮತ್ತು ಘಟಪ್ರಭಾ ಯೋಜನೆಗಳು ಬೆಳಗಾಂ.							86.12	114.71	220.96	484.53	586.11	587.73
3)	ಕಾವೇರಿ ಜಲಾನಯನ ಯೋಜನೆಗಳು ಮೈಸೂರು.	4.73	12.95	14.73	24.56	70.02	90.23	87.21	98.02	234.37	337.45	210.84	261.27
4)	ಕೃಷ್ಣ ಮೇಲ್ದಂಡೆ ಯೋಜನೆ ಭೀಮರಾಯನಗುಡಿ	-	-	-	-	-	-	79.12	86.32	437.93	664.93	879.56	1498.03
5)	ಭದ್ರಾ ಯೋಜನೆ ಶಿವಮೊಗ್ಗ.	-	-	-	-	-	-	6.03	12.48	16.17	49.15	34.19	35.98

ಕ್ರಮ ಸಂಖ್ಯೆ	ಯೋಜನೆಯ ಹೆಸರು	86-87	87-88	88-89	89-90	90-91	91-92	92-93 (ಜನವರಿ 93ರ ಅಂತ್ಯದವರೆಗೆ)	ಒಟ್ಟು
1)	ತುಂಗಭದ್ರಾ ಯೋಜನೆ, ಮುನಿರಾಬಾದ್	126.75	224.63	175.15	195.55	284.05	310.87	170.71	2283.76
2)	ಮಲಪ್ರಭಾ ಮತ್ತು ಘಟಪ್ರಭಾ ಯೋಜನೆಗಳು, ಬೆಳಗಾಂ.	388.08	248.14	340.15	426.84	466.80	475.96	267.41	5384.04
3)	ಕಾವೇರಿ ಜಲಾನಯನ ಯೋಜನೆಗಳು ಮೈಸೂರು.	346.66	246.17	295.66	399.13	356.63	514.94	227.88	3833.45
4)	ಕೃಷ್ಣಾ ಮೇಲ್ದಂಡೆ ಯೋಜನೆ ಭೀಮರಾಯನಗುಡಿ.	1408.22	811.52	820.09	755.49	638.42	697.49	592.26	9059.17
5)	ಭದ್ರಾ ಯೋಜನೆ ಶಿವಮೊಗ್ಗ.	73.57	50.42	66.78	169.61	178.49	532.20	274.79	1499.86

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೇ, ಮಾನ್ಯ ನೀರಾವರಿ ಮಂತ್ರಿಗಳು ಇರುವುದರಿಂದ ನಾನು ತಮ್ಮ ಮುಖಾಂತರ ಅವರಲ್ಲಿ ಒಂದು ವಿನಂತಿ ಮಾಡಿಕೊಳ್ಳುತ್ತೇನೆ. ಕಮ್ಯಾಂಡ್ ಏರಿಯಾ ಡೆವಲಪ್‌ಮೆಂಟ್‌ಗಾಗಿ ಏನೊಂದು ಇಲಾಖೆ ಇದೆ ಅದನ್ನು ತಾವು ಒಂದು ಸಾರಿ ರಿವ್ಯೂ ಮಾಡಿದರೆ ಒಳ್ಳೆಯದೆನಿಸುತ್ತದೆ. ಕಮ್ಯಾಂಡ್ ಏರಿಯಾ ಡೆವಲಪ್‌ಮೆಂಟ್ ಇಲಾಖೆಯ ಕೆಲಸ ತೃಪ್ತಿದಾಯಕವಾಗಿದೆ ಎಂದು ಮಾನ್ಯಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಅವರಿಂದ ಉತ್ತರ ಬಂದಿದ್ದೂ ಆ ಮಂತ್ರಿಗಳು ಮಾತ್ರ ಇಲ್ಲಿಲ್ಲ. ಮಾನ್ಯ ವಿರೋಧಪಕ್ಷದ ಉಪನಾಯಕರಾದ ಮಾನ್ಯ ಸಿಂಧ್ಯರವರಿಗೂ, ನನಗೂ ಅವರು ಉತ್ತರವನ್ನು ಕೊಟ್ಟಿದ್ದಾರೆ. ಆದರೂ ಮಾನ್ಯ ಉಪ ಮುಖ್ಯಮಂತ್ರಿಗಳು ಈ ಇಲಾಖೆಯನ್ನು ಒಮ್ಮೆ ರಿವ್ಯೂ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಎಂ. ಕೃಷ್ಣ : (ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಸಚಿವರ ಪರವಾಗಿ) ಮಾನ್ಯ ಅಧ್ಯಕ್ಷರೇ, ಕಮ್ಯಾಂಡ್ ಏರಿಯಾ ಡೆವಲಪ್‌ಮೆಂಟ್ ಇಲಾಖೆಯನ್ನು ರಿವ್ಯೂ ಮಾಡಬೇಕೆಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಆಗಿಂದಾಗ್ಗೆ ಈ ಇಲಾಖೆಯನ್ನು ರಿವ್ಯೂ ಮಾಡುತ್ತಿದ್ದಾರೆಂದು ನನ್ನ ಅನಿಸಿಕೆ. ಹಾಗೇನಾದರೂ ರಿವ್ಯೂ ಆಗಿಲ್ಲದಿದ್ದರೆ ಅದನ್ನು ರಿವ್ಯೂ ಮಾಡಿಸುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೇ, ಪ್ರಾಜೆಕ್ಟ್ ಕೋ-ಆರ್ಡಿನೇಟರ್ ಎನ್ನತಕ್ಕ ಹುದ್ದೆ ಮತ್ತು ಅಡ್ಮಿನಿಸ್ಟ್ರೇಟರ್ ಎನ್ನತಕ್ಕ ಹುದ್ದೆಗಳು ಎರಡೂ ಕೂಡ ಒಂದೇ ದರ್ಜೆಯ ಹುದ್ದೆಗಳಾಗಿರುವುದರಿಂದ ಈ ಎರಡೂ ಹುದ್ದೆಗಳ ಕೆಲಸವೂ ಕೂಡ ಒಂದೇ ಆಗಿರುವುದರಿಂದ ಇವೆರಡೂ ಹುದ್ದೆಗಳನ್ನೂ ಕ್ಲಬ್ ಮಾಡಿ ಒಂದೇ ಹುದ್ದೆಯನ್ನಾಗಿ ಮಾಡಿದರೆ ಇನ್ನೂ ಹೆಚ್ಚಿನ ಪ್ರಗತಿಯನ್ನು ಸಾಧಿಸುವುದಕ್ಕೆ ಸಾಧ್ಯವಾಗುತ್ತದೆಂದು ನನ್ನ ಸಲಹೆ . ಆದ್ದರಿಂದ ಸರ್ಕಾರ ಇದರ ಬಗ್ಗೆ ಯೋಚನೆ ಮಾಡಬೇಕು.

ಶ್ರೀ ಎಸ್. ಎಂ. ಕೃಷ್ಣ : ಮಾನ್ಯ ಸದಸ್ಯರು ತಮ್ಮ ಅನುಭವದ ಹಿನ್ನೆಲೆಯಲ್ಲಿ ಈ ಪ್ರಶ್ನೆಯನ್ನು ಕೇಳುತ್ತಿದ್ದಾರೆ. ಸರ್ಕಾರ ಅವರ ಸಲಹೆಯನ್ನು ಬಹಳ ಗೌರವದಿಂದ ಗಮನಿಸುತ್ತದೆಂದು ಹೇಳಬಯಸುತ್ತೇನೆ.

ವಿಷಯ : ರಾಜ್ಯ ಹೆದ್ದಾರಿಗಳನ್ನು ರಾಷ್ಟ್ರೀಯ ಹೆದ್ದಾರಿಗಳನ್ನಾಗಿ ಪರಿವರ್ತಿಸುವುದು.

Q : 1423

ಶ್ರೀ ನಾರಾಯಣರಾವ್ ಮನಹಳ್ಳಿ (ಬೀದರ್): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಹೆದ್ದಾರಿಗಳನ್ನು ರಾಷ್ಟ್ರೀಯ ಹೆದ್ದಾರಿಗಳನ್ನಾಗಿ ಪರಿವರ್ತಿಸಲು ಸರ್ಕಾರದಲ್ಲಿ ಯಾವುದಾದರೂ ಪ್ರಸ್ತಾವನೆ ಇದೆಯೇ?